ಮುಕುಂದ ಹೆರಕಲ್ಲ, ಗುಲಬರ್ಗಾ
*ಹಗಲು ಎಂಟು ಗಂಟೆ ಆದರೂ ದಾರಿದೀಪ ಉರಿಸುವ ವಿದ್ಯುತ್ ಮಂಡಳಿಗೆ ಏನೆನ್ನಬೇಕು?*



ವಿಕೃತ್ ಮಂಡಳಿ.

ವೀರೇಂದ್ರ. ಎಂ. ಮೇಗೂರ, ಧಾರವಾಡ
*ದೇವರುಗಳು ಸೇವಿಸುವ ಮದ್ಯಕ್ಕೂ, ಮಾನವ ಕುಡಿಯುವ ಹೆಂಡಕ್ಕೂ ಏನು ವ್ಯತ್ಯಾಸ?*
ಮಾನವರದು ಲಿಕ್ ಮಾಡಿದರೆ ಕಿಕ್ ಕೊಡುವ ಲಿಕ್ಕರ್. ದೇವತೆಗಳ ಡ್ರಿಂಕ್ಸ್ ಡಿ–ವೈನ್!

ಡಾ. ವಿ.ಪುಗಳೇಂದಿ, ಸಿರುಗುಪ್ಪ
*ದಿನವೂ ರಸ್ತೆಗಳಲ್ಲಿ ವಾಹನ ಜಾಮ್ ಆಗುವ ಪರಿಸ್ಥಿತಿಯಲ್ಲಿ ಟ್ರಾಫಿಕ್ ಪೋಲೀಸರು ಬ್ರೆಡ್ ತಂದಿಟ್ಟುಕೊಂಡೇ ಡ್ಯೂಟಿ ಮಾಡಿದರೆ ಹೇಗೆ?*
ಅಗತ್ಯವಿಲ್ಲ. ಜಾಮ್ ಮಧ್ಯದಲ್ಲಿ ತೂರಿಕೊಂಡು ಹೋಗಿ ಅವರಿವರನ್ನು ಹಿಡಿದರೆ 'ಬ್ರೆಡ್' ಅಷ್ಟೇ ಅಲ್ಲದೆ 'ಪಾಮ್ ಗ್ರೀಸಿಂಗೂ' ಆಗುತ್ತದೆ.

ಕೋಕಿಲಾ ಡಿ., ಕುರುವಳ್ಳಿ
*ದುಡ್ಡಿಗೆ ಬೆಲೆ ಇರುತ್ತೆ. ಆದರೆ ಮನುಷ್ಯನಿಗೆ ಬೆಲೆ ಯಾಕಿಲ್ಲ?*




ಇದೆಯಲ್ಲ! ಬೆಲೆ ಇರುವುದರಿಂದಲೇ ಐಪಿಎಲ್ ಸಂತೆಯಲ್ಲಿ ಪ್ರಾಣಿಗಳಂತೆ ಹರಾಜು ಆಗುವುದು.

ಎಸ್.ಜಿ. ಕರನಂದಿ, ಹುನಗುಂದ
*ಸಮಾಧಾನಕ್ಕೆ ಸಂಪತ್ತು ಪೂರಕವೇ?*
ವಿಚ್ಛೇದನ ಪಡೆಯುವವಳ ಸಮಾಧಾನಕ್ಕಂತೂ ಖಂಡಿತ ಪೂರಕ.

ಜಿ.ಎನ್. ಕಟ್ಟೀಮನಿ, ರಾಣೇಬೆನ್ನೂರ
*ನಮ್ಮ ರಾಜ್ಯದೊಳಗೆ ಇಷ್ಟೆಲ್ಲಾ ಅತ್ಯಾಚಾರ, ಅನಾಚಾರ ನಡೆಯುತ್ತಿದ್ದರೂ ಒಳ್ಳೆಯ ಮಳೆ, ಬೆಳೆ ಆಗುತ್ತಿದೆಯಲ್ಲಾ, ಏಕಿರಬಹುದು ಸಾಹೇಬ್ರ?*
ಹೊಸ ಕೊಳಕು ಹಳೆ ಒಳಿತು ಸೇರುವುದು ಜಗನಿಯಮ; ಕೆಡುಕನಾವರಿಸೊಳಿತು ಜೈಸುವುದೆ ಧರ್ಮ; ಕೆಡುಕನುಂ ಒಳಿತನುಂ ಸಮಚಿತ್ತದಿಂ ಹೊಂದು; ಜಯ ಒಳಿತಿನದೆ ಕಡೆಗೆ ಮಂಕುದಿಣ್ಣೆ

ಕೆ.ಯಂ. ವೀರೇಶ್, ಕೂಡ್ಲಿಗಿ
*ನಿಮ್ಮ ಉತ್ತರಗಳಿಂದ ನಾವು ಖುಷಿಯಾಗಿದ್ದೇವೆ. ಅರ್ಧರಾಜ್ಯ ತೆಗೆದುಕೊಂಡು ರಾಜ್ಯಭಾರ ಮಾಡುವಿರೋ, ಅರ್ಧಾಂಗಿಯಾಗಿ ಅರ್ಥಪೂರ್ಣ ಜೀವನ ಸಾಗಿಸುತ್ತೀರೋ?*
ತಿಳಿಯುತ್ತಿಲ್ಲ. ರಾಜ್ಯ 'ಭಾರ' ಮಾಡಲು ಇಷ್ಟವಿಲ್ಲ, 'ಅರ್ಥಪೂರ್ಣ' ಉರುಫ್ ಡಿಕ್ಷನರಿಯಂತೆ ಮೂಲೆಗುಂಪಾಗಿ ಜೀವನ ನಡೆಸಲೂ ಒಲ್ಲೆ.

8ಮಲ್ಲನಗೌಡ. ಸಿ. ಪಾಟೀಲ, ರಂಭಾಪೂರ
*ಇಡೀ ಜಗತ್ತು ಕಪ್ಪು ವರ್ಣದಿಂದ ಕೂಡಿದ್ದರೆ ಹೇಗಿರುತ್ತಿತ್ತು?*
ಆಗ ವೈಟ್ ಮನಿ ಇಟ್ಟುಕೊಂಡವನನ್ನು ಜೈಲಿಗೆ ಹಾಕುತ್ತಿದ್ದರು!

ವಿ.ಎಸ್. ಹಿಂದೂಪುರ, ಬಳ್ಳಾರಿ
*ಇಲ್ಲೊಬ್ಬ ಅಂಗೈ ಹುಣ್ಣಿಗೆ ಕನ್ನಡಿ ಬೇಕೆನ್ನುತ್ತಾನಲ್ಲ?*
ಪಾಪ! ಯಾರೋ ಅಂಗೈ ತಿರುಚಿರುವ, ಮೊಣಕೈ ಮಡಿಸಲಾಗದ, ಕತ್ತು ಬಗ್ಗಿಸಲಾಗದ, ಸಾಫ್ಟ್‌ವೇರ್ ಇಂಜಿನಿಯರ್ ಇರಬೇಕು.

ಬಿ.ಆರ್. ರವಿಕುಮಾರ್, ಹೈದರಾಬಾದ್
*ರಾಜಕಾರಣಿಗಳು ಪ್ರಾಮಾಣಿಕತೆ ಬಗ್ಗೆ ಮಾತನಾಡುವಾಗ ಮಹಾತ್ಮ ಗಾಂಧಿಯತ್ತ ಬೆರಳು ತೋರಿಸುತ್ತಾರಲ್ಲ?*
ಮಹಾತ್ಮ ಅಲ್ಲದೆ ಇನ್ಯಾವ ಗಾಂಧಿಯತ್ತ ಬೆರಳು ತೋರಿಸಿದರೂ ಜನ ಒಪ್ಪುವುದಿಲ್ಲವಂತೆ.

ಸೃಜನ ಜೈನ್, ಹೂವಿನಹಡಗಲಿ
*ಹೆಂಗಸರ ಮನಸ್ಸಿನಲ್ಲಿ ಒಳಗೊಂದು, ಹೊರಗೊಂದು ವಿಷಯ ಇರುತ್ತೆ. ಏಕೆ ಸಾರ್?*
ಚೌಕಾಶಿ ಮಾಡಬೇಕಾದರೆ ಇರಬೇಕಾದ್ದೇ ಹಾಗೆ!

ರಮೇಶ್. ಜ. ಬೊಂಗಾಳೆ, ಬೈಲಹೊಂಗಲ
*ವಿಜ್ಞಾನಿಗಳು ಕಂಡುಹಿಡಿಯದೇ ಇರುವಂಥದ್ದು ಏನು ಸಾರ್?*
ಎಲ್ಲವನ್ನೂ ಕರಗಿಸುವಂತಹ ವಸ್ತುವನ್ನು.

## ಬಹುಮಾನಿತ ಪ್ರಶ್ನೆ

ಎಚ್.ಆರ್.ದೇಸಾಯಿ, ರಾಯಚೂರು
*ಸಾವು ಬಂದಾಗ ತೃಪ್ತಿಯಿಂದ ಮತ್ತು ಸಂತೋಷವಾಗಿ ಸಾಯಬೇಕಾದರೆ, ಬದುಕಿರುವಾಗ ಏನು ಮಾಡಿರಬೇಕು?*
ಹತ್ತು ಜನ್ಮ ದುಡಿದರೂ ತೀರಲಾರದಷ್ಟು ಸಾಲ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಇಲ್ಲಿ ಅತ್ತೆ ಜೊತೆ ಹೇಗಿರಬೇಕು, ಜಗಳ ಹೇಗೆ ಆಡಬೇಕು ಎಂಬುದನ್ನು ಹೇಳಿಕೊಡಲಾಗುವುದು ಎಂಬ ಬೋರ್ಡ್ ಇದೆಯಲ್ಲಾ...?*
ಬೋರ್ಡೇನೋ ಇದೆ. ಸ್ಟೂಡೆಂಟ್ಸೇ ಇಲ್ಲವಂತೆ. ಮೀನಿಗೆ ಈಜು ಹೇಳಿಕೊಡಲು ಶಿಬಿರ ತೆರೆದಂತಾಯಿತು!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ರಾಜಕೀಯವೆಂಬ ಹೈವೇ ರಸ್ತೆಯಲ್ಲಿ ಚುನಾವಣೆ ಸ್ಪೀಡ್ ಬ್ರೇಕರ್ ಆದರೆ ಝೀಬ್ರಾ ಕ್ರಾಸಿಂಗ್ ಏನು ಸಾರ್?*
ಚುನಾವಣೆಯಾದ ನಂತರ ಆ ಪಕ್ಷದಿಂದ ಈ ಪಕ್ಷಕ್ಕೆ ದಾಟಲು ಅನುಕೂಲವಾದ ರೆಸಾರ್ಟು!

ಪ್ರೊ.ಮಧೂರು ಮೋಹನ ಕಲ್ಲೂರಾಯ, ಗೇರುಕಟ್ಟೆ
*ಅಧಿಕಾರ ಇಲ್ಲದಿದ್ದಾಗ ಒಂದು ಥರ ಇದ್ದು, ಅಧಿಕಾರ ಬಂದಾಗ ನೀತಿ, ನಿಯತ್ತು, ಕರ್ತವ್ಯ, ಎನ್ನುವವರಿಗೆ ಏನು ಹೇಳೋಣ?*



ಎಷ್ಟು ಬೊಗಳಿದರೇನು, ಕಡೆಗೆ ಎಸೆದ ಮೂಳೆಗೆ ಬಾಯಿ ಬಿಡುವುದೇ ಶ್ವಾನದ ಗುಣ.

ಮಲ್ಲಿಕಾರ್ಜುನ. ಹ. ಬಗಲಿ, ಜತ್ತ
*ಹಣ ಹೆಚ್ಚೊ, ಗುಣ ಹೆಚ್ಚೊ ತಿಳಿಸಿರಿ?*
ಯಾರಿಗೆ ಯಾವುದು ಇಲ್ಲವೋ ಅದೇ.

ಕುಬೇರಪ್ಪ ಎಂ. ವಿಭೂತಿ, ಹರಿಹರ
*ಒಂದು ವೇಳೆ ಮನುಷ್ಯರಿಗೂ ದೇವರಿಗೆ ಇರುವ ಹಾಗೆ ವರ ಕೊಡುವ ಶಕ್ತಿ ಇದ್ದಿದ್ದರೆ ಏನಾಗುತ್ತಿತ್ತು?*
ಅಲ್ಲಲ್ಲಿ, ಆಗಾಗ್ಗೆ ವರ ಹರಾಜ್‌ಗಳು ನಡೆಯುತ್ತಿದ್ದವು.

■ ರಾಮ್